ಬರುವುದಿಲ್ಲ ಆದರೆ ಆ ಪರಿಸ್ಥಿತಿಯಲ್ಲಿ ನೀರು ಜಾಸ್ತಿ ಇತ್ತು, ಮತ್ತೊಂದು ಆಯಿತು. ನಾವು ಬಹಳ ಸಂತೋಷಗೊಂಡೆವು. ಮಳೆ ಬಹಳ ಚೆನ್ನಾಗಿ ಬರುತ್ತಿದೆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಎನ್ನತಕ್ಕ ಒಂದು ವರದಿ ಇದೆ. ನನಗೆ ಬಹಳ ಸಂತೋಷದ ವಿಚಾರ ಮಳೆ ಬಹಳ ಚೆನ್ನಾಗಿ ಆಗುತ್ತಿದೆ. ನೀರಿನ ಇನ್‌ಫ್ಲೋ ಕೂಡ ಈಗಾಗಲೇ ಕೆಲವು ರಿಸರ್ವಾಯರ್‌ನಲ್ಲಿ ಚೆನ್ನಾಗಿದೆ. ಆ ಡೀಟೇಲ್ಸ್ ನನಗೆ ಸಿಕ್ಕಿಲ್ಲ. ಅದು ಚೆನ್ನಾಗಿದೆ ಎನ್ನತಕ್ಕದ್ದು ಗೊತ್ತಾಗುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಆಸೆ ಏನು ಅಂದರೆ ನೀರು ಚೆನ್ನಾಗಿ ಬರಲಿ ನಮ್ಮ ರಿಸರ್ವಾಯರ್ಸ್‌ನಲ್ಲಿ ತುಂಬಲಿ ತುಂಬಿ ಹೊರಟು ಹೋಗಿ ಮೆಟ್ಟೂರು ಡ್ಯಾಮ್ ತುಂಬಲಿ ಹಿಂದೆ ನಾನು ಮುಖ್ಯಮಂತ್ರಿ ಇದ್ದಾಗ ಅಲ್ಲಿನ ಮುಖ್ಯಮಂತ್ರಿಗಳಿಗೆ ಹೇಳಿದೆ. ನೀವು ನೀರು ಕೇಳುತ್ತಿದ್ದೀರಿ, ನೀರು ತಾನಾಗಿ ಬಂದು ಬಿಟ್ಟಿದೆ, ನಾವು ನೀರು ಬಿಡುವ ಪ್ರಶ್ನೆ ಇಲ್ಲ: ಮೆಟ್ಟೂರ್ ಡ್ಯಾಮಿಗೆ ಒಂದು ಹನಿ ನೀರು ಬಿಡತಕ್ಕ ಪ್ರಶ್ನೆ ಇಲ್ಲ ಎಂದು ಚೇಷ್ಟೆ ಮಾಡಿದೆ. They had to open all the crest gates and they opened. ನಿಮಗೆಲ್ಲಾ ಗೊತ್ತಿರುವ ಹಾಗೆ ಸಂಪೂರ್ಣವಾಗಿ ಸಮುದ್ರಕ್ಕೆ ನೀರು ಹೊರಟು ಹೋಯಿತು. Not only in Tamilndu, but also in Pondicherry and other places. ಆ ಕಡೆ ಏರಿಯಾ ಅಲ್ಲದೆ ಸಮುದ್ರಕ್ಕೆಲ್ಲಾ ನೀರು ಹೊರಟು ಹೋಯಿತು. ಅದನ್ನು ತಡೆ ಹಿಡಿಯುವುದಕ್ಕೆ ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಒಂದೇ ಒಂದು ವಿಚಾರ ಬರುತ್ತದೆ, ಅದೇನೆಂದರೆ ಮಳೆ ಜಾಸ್ತಿಯಾದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಮಳೆಯು ಕಡಿಮೆಯಿದ್ದಾಗ ಡಿಸ್ಟೆಸ್ ಫಾರ್ಮುಲಾ ಎನ್ನತಕ್ಕ ವಿಚಾರ ಅಥವಾ ತೊಂದರೆಯಾಗತಕ್ಕ ವಿಚಾರ ಬರುತ್ತದೆ. may be, water level maight have been very low in Mettur dam, we don't know, but we have got water level low in all four reservoirs in the Cavery basin. ಆ ರೀತಿಯಾಗಿದ್ದಾಗ ನೀರನ್ನು ಬಿಡತಕ್ಕ ಪ್ರಶ್ನೆಗೆ ಸರ್ಕಾರದ ಅಭಿಪ್ರಾಯವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಕಾನೂನು ಪಂಡಿತರು ಅಭಿಪ್ರಾಯವನ್ನು ಕೊಟ್ಟರೂ ಸಹ ಯಾವುದೇ ಸಂದರ್ಭದಲ್ಲೂ ಸಹ ಅದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ತಾವು ಹೇಳಿದ್ದೀರಿ, ತಮ್ಮ ಕಾರಣ ಸಕಾರಣವೆಂದು ಕರೆದಿರಬಹುದು, ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪಷ್ಟಪಡಿಸುವುದೇನೆಂದರೆ, ಈಗ ನೀರನ್ನು ಬಿಟ್ಟಿರುವ ಕ್ರಮ ಸರಿಯಿಲ್ಲ. ಇದರ ಬಗ್ಗೆ ಮುಂದೆ ಏನು ಎನ್ನುವ ಬಗ್ಗೆ ತಾವು ನಮ್ಮೆಲ್ಲರನ್ನು ಕರೆದು ಕೇಳಿ ತೀರ್ಮಾನ ಮಾಡಬೇಕಾಗಿತ್ತು ಎನ್ನುವ ಅಭಿಪ್ರಾಯಕ್ಕೆ ನಾನೂ ಧ್ವನಿಗೂಡಿಸುತ್ತೇನೆ ತಾವು ಎಲ್ಲರನ್ನು ಕರೆದು ಇದರ ಬಗ್ಗೆ ಮಾತನಾಡಿ ತೀರ್ಮಾನ ಮಾಡುತ್ತೇನೆಂದು ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಇದರ ಬಗ್ಗೆ ಎಲ್ಲರನ್ನು ಕರೆದು ಚರ್ಚೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರಲ್ಲೂ ಸಹ ನಾನು ವಿನಂತಿ ಮಾಡುತ್ತಿದ್ದೇನೆ ಈ ವಿಚಾರ ಸಂಪೂರ್ಣವಾಗಿ ಬಗೆಹರಿಯಬೇಕು. ಈ ಮಧ್ಯೆ ಇದಕ್ಕೆ ತಾವು ಅನುವುಮಾಡಿಕೊಡುತ್ತೀರೆಂದು ತಿಳಿದುಕೊಂಡಿದ್ದೇನೆ ಅದಕ್ಕಾಗಿ ಸಭೆಯನ್ನು ಸ್ವಲ್ಪಕಾಲ ಮುಂದಕ್ಕೆ ಹಾಕಿದರೆ ಬಹಳ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಈ ಸಂದರ್ಭದಲ್ಲಿ ತಾವೇನು ನೀರನ್ನು ಬಿಟ್ಟಿದ್ದೀರಿ ಅದು ತಪ್ಪು, ಅದಕ್ಕೆ ನಮ್ಮ ಪಕ್ಷದ ಪರವಾಗಿ ವಿರೋಧವನ್ನು ವ್ಯಕ್ತಪಡಿಸಿ ಅದಕ್ಕೆ ಸೂಚಕವಾಗಿ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ: ನಮಸ್ಕಾರ

(ಕರ್ನಾಟಕ ಕಾಂಗ್ರೆಸ್ ಪಕ್ಷದವರು ಸಭಾತ್ಯಾಗ ಮಾಡಿದರು)

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಾಗ ಕೆಲವು ಮಾತುಗಳನ್ನು ಹೇಳಿದ್ದಾರೆ. ನಾನು 5 ಟಿ.ಎಂ.ಸಿ ನೀರನ್ನು